ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ - ಲಕ್ಷ್ಮೇಶ್ವರ ರಸ್ತೆ ಬಹಳ ಮಹತ್ವದ ರಸ್ತೆ. ನಾನು ಸಾಕಷ್ಟು ಸಲ ಆ ರಸ್ತೆಯಲ್ಲಿ ಹೋಗಿದ್ದೇನೆ. ಅಲ್ಲಿಗೆ ಬಸ್ಸುಗಳು ಕೆಲವೊಮ್ಮೆ ಹೋಗಲಾರದಂತಹ ಪರಿಸ್ಥಿತಿ ಇರುವುದರಿಂದ ಬಸ್ ಸಂಚಾರ ಬಂದ್ ಆಗಿದೆ. ಬಹುಶಃ ಇವತ್ತು ಅಲ್ಲಿ ಯಾವುದೇ ವಾಹನಗಳು ಹೋಗದೆ ಇರುವಂತಹ ಪರಿಸ್ಥಿತಿ ಇದೆ. ಈಗ ಆ ರಸ್ತೆಗೆ 14 ಲಕ್ಷ ರೂಪಾಯಿ ಏನು ರಿಪೇರಿ ಸಲುವಾಗಿ ಕೊಡುತ್ತಿದ್ದಾರೆ, ಅದು ನೀರಿನಲ್ಲಿ ಹಾಕಿದ ಹಾಗೆ ಆಗುತ್ತದೆ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಮಾನ್ಯ ಸದಸ್ಯರಾದ ಶಿವಳ್ಳಿಯವರು ಹೇಳಿದ ಹಾಗೆ ಒಂದು ಕೋಟಿ ರೂಪಾಯಿ ವಿಶೇಷ ಅನುದಾನ ಮಾಡಿ ಬಿಡುಗಡೆ ಮಾಡಿಕೊಟ್ಟರೆ, ಆ ರಸ್ತೆಯನ್ನು ಅಭಿವೃದ್ಧಿ ಮಾಡಿದರೆ, ಅದು ಬಹಳ ಒಳ್ಳೆಯ ರಸ್ತೆಯಾಗಿ, ಇಡೀ ಎಂಟು ಹತ್ತು ತಾಲ್ಲೂಕಿಗೆ ಸಂಪರ್ಕ ಕೊಡುತ್ತದೆ. ಇಡೀ ಜಿಲ್ಲೆಯಲ್ಲಿ ಅದು ಬಹಳ ದೊಡ್ಡ ಹಾಗೂ ಮಹತ್ವದ ರಸ್ತೆ. ಆದುದರಿಂದ ನೀವು ಅದಕ್ಕೆ ಪರ್ಮನೆಂಟ್ ಯೋಜನೆಯನ್ನು ಹಾಕಿ ಇದರ ಕೆಲಸವನ್ನು ತೆಗೆದುಕೊಳ್ಳುವುದು ಅವಶ್ಯಕವಿದೆಯೆಂದು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ರಸ್ತೆಗೆ ದುರಸ್ತಿಗಾಗಿ 14 ಲಕ್ಷ ರೂಪಾಯಿ ಕೊಟ್ಟಿದೆ. ತಮಗೆ ಶಿರಹಟ್ಟಿ ರಸ್ತೆ ಬರುತ್ತದೆ. ನನಗೆ ಗೊತ್ತು, ಏಕೆಂದರೆ ನಾನೂ ಕೂಡ ಆ ರಸ್ತೆಯಲ್ಲಿ ಹೋಗಿದ್ದೇನೆ. ಎಸ್.ಎಸ್. ಪಾಟೀಲ್ ಹಾಗೂ ಹೆಚ್.ಕೆ. ಪಾಟೀಲ್ ಒಂದೇ ಕಡೆಯವರು. ನೀವು ಗದಗ್ ಕಡೆಯಿಂದ ಹೋಗುತ್ತೀರಿ. ಅದು ಬಹಳ ಅವಶ್ಯಕತೆ ಇದೆ ಮತ್ತು ಬಹಳ ಕೆಟ್ಟಿದೆ ಎನ್ನುವುದು ಗಮನಕ್ಕೆ ಬಂದಿದೆ. ಇಲಾಖೆಯವರು ಆ ರಸ್ತೆಗೆ 19 ಲಕ್ಷ ರೂಪಾಯಿ ಅಲ್ಲದೆ ಇನ್ನು 76 ಲಕ್ಷ ರೂಪಾಯಿ ಬೇಕು ಎಂದು ಅಂದಾಜು ಮಾಡಿದ್ದಾರೆ. ಆದರೆ ಹಣದ ಅಭಾವದಿಂದ ಈ ಕೆಲಸ ನಿಂತಿದೆ. ಮುಖ್ಯವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರು ಒತ್ತಾಯ ಮಾಡುತ್ತಿರುವುದರಿಂದ ನಾನು ಖಂಡಿತವಾಗಿ ಇದನ್ನು ಇಲಾಖೆ ಮುಖ್ಯಸ್ಥರಲ್ಲಿ ಮತ್ತು ಆರ್ಥಿಕ ಇಲಾಖೆಯವರ ಜೊತೆಯಲ್ಲಿ ಎಕ್ಸಾಮಿನ್ ಮಾಡಿಸಿ ಆದಷ್ಟು ಬೇಗ ಹೆಚ್ಚಿನ ಹಣವನ್ನು ಮತ್ತು ಈ ರಸ್ತೆಯನ್ನು ದುರಸ್ತಿ ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತೇನೆಂದು ಭರವಸೆ ಕೊಡುತ್ತೇನೆ.

ಮಂಡ್ಯ ಜಿಲ್ಲೆಯಲ್ಲಿ ಕಾಡು ಹಂದಿಗಳ ಹಾವಳಿ

582 - ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ (ಶ್ರೀರಂಗಪಟ್ಟಣ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಡ್ಯ ಜಿಲ್ಲೆಯಲ್ಲಿ ಕಾಡು ಹಂದಿಗಳ ಹಾವಳಿ ಹೆಚ್ಚಾಗಿ ರೈತರ ಬೆಳೆ ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಶ್ರೀರಂಗಪಟ್ಟಣ ವ್ಯಾಪ್ತಿಯಲ್ಲಿ ನೂರಾರು ಎಕರೆಯಲ್ಲಿ ಕಾಡು ಹಂದಿಗಳಿಂದ ಬೆಳೆ ನಾಶವಾಗಿ ರೈತರು ಕಂಗಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಈ ಕಾಡು ಹಂದಿಗಳ ಕಾಟವನ್ನು ತಪ್ಪಿಸಿ ರೈತರ ಬೆಳೆಗಳಿಗೆ ರಕ್ಷಣೆ ಕೊಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಬಂದಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಕಾಡುಹಂದಿಗಳ ಕಾಟವನ್ನು ತಪ್ಪಿಸಲು ಕಾಡುಹಂದಿಗಳು ಫಸಲು ನಾಶ ಮಾಡುವ ವಿಷಯವಾಗಲೀ ಅಥವಾ ಗದ್ದೆಗಳಿಗೆ ಪ್ರವೇಶ ಮಾಡುವ ವಿಷಯ ತಿಳಿಸಿದ ಕೂಡಲೇ ಇಲಾಖಾ ಸಿಬ್ಬಂದಿ ಹಾಗೂ ಗ್ರಾಮದ ಜನತೆಯೊಂದಿಗೆ ಹೋಗಿ ಪರಿಶೀಲಿಸಿ ಕಾಡಿಗೆ ಓಡಿಸು ಕ್ರಮವನ್ನು ಕೈಗೊಳ್ಳುತ್ತಾರೆ.

ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ ಕಾಡು ಹಂದಿಗಳು ಬಹಳ ಜಾಸ್ತಿ ಇವೆಯೆಂದು ಎಲ್ಲಾ ಕಡೆಗಳಿಂದ ದೂರು ಬರುತ್ತಿವೆ. ನನ್ನ ಕ್ಷೇತ್ರವಾದ ಶ್ರೀರಂಗಪಟ್ಟಣ ಹಾಗೂ ಹೋಬಳಿ ಅರಕೆರೆಯ ವ್ಯಾಪ್ತಿಯಲ್ಲಿ ಬಹಳ ಹಳ್ಳಿಗಳಲ್ಲಿ ಇವುಗಳ ಹಾವಳಿಯಿಂದ ಜನರಿಗೆ ತೊಂದರೆಯಾಗುತ್ತಿದೆ. ಹಂದಿಗಳು ಕಬ್ಬು, ರಾಗಿ, ಜೋಳ ದ್ವಿದಳ ಧಾನ್ಯಗಳ ಬೆಳೆಗಳಲ್ಲಾ ಸೇರಿದಂತೆ ಹಾವಳಿ ಮಾಡಿ ತುಂಬಾ ನಷ್ಟವಾಗುತ್ತಿದೆ. ಮತ್ತು ಇದೇ ರೀತಿ ಇವುಗಳ ಹಾವಳಿ ಜಾಸ್ತಿಯಾಗುತ್ತಿದ್ದರೆ ಮುಂದೆ ಒಂದು ದಿವಸ ಭೂಮಿ ಬರಡಾಗುತ್ತದೆ ಹಾಗೂ ರೈತನಿಗೆ ಆಹಾರ ಧಾನ್ಯ ಬೆಳೆಯಲು ಕಷ್ಟವಾಗುತ್ತದೆ. ಆದುದರಿಂದ ಈ ಹಂದಿಗಳನ್ನು ಸುಲಭವಾಗಿ ಕಾಡಿಗೆ ಓಡಿಸುತ್ತೇವೆಂದು ನಾನು ಕೇಳಿದ ಪ್ರಶ್ನೆ ಬಹಳ ಸರಳವಾಗಿ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಅದು ಅಷ್ಟು ಸುಲಭವಲ್ಲ. ರೈತರು ಈ ಹಂದಿಗಳನ್ನು ಬಹಳ ಶ್ರಮಪಟ್ಟು ಓಡಿಸುವುದಕ್ಕೆ ಹೋಗಿ ಕೈಕಾಲೂ ಮುರಿದುಕೊಂಡಿದ್ದಾರೆ. ಮತ್ತು ಗೆಂಡೆಹೊಸಳ್ಳಿಯಲ್ಲಿ ಒಬ್ಬ ಹುಡುಗನ ಸಾವಾಗಿದೆ. ಆದುದರಿಂದ ಅವುಗಳನ್ನು ಓಡಿಸುವುದು ಅಂದುಕೊಂಡಷ್ಟು ಸುಲಭವಲ್ಲ. ಕಾಡಿಗೆ ಓಡಿಸಿದರೆ ಅವು ಪುನಃ ವಾಪಸ್ಸು ಬರುತ್ತದೆ. ಆದುದರಿಂದ ಅವುಗಳು ವಾಪಸ್ಸು ಬರದಹಾಗೆ ಕಠಿಣವಾದಂತಹ ಕ್ರಮ ಜರುಗಿಸಬೇಕೆನ್ನುವುದನ್ನು ಅವರು ಮನಗಾಣಬೇಕು. ಕಾಡು ಹಂದಿ ಕಾಟ ಎಷ್ಟು ಎಂದು ಹೇಳಿಕೊಳ್ಳುವುದಕ್ಕಾಗುವುದಿಲ್ಲ, ಈಗಾಗಲೇ ನೂರಾರು ಎಕರೆಗೆ ನಷ್ಟವಾಗಿದೆ. ತುಂಬಾ ಜನ ಬಂದು ಇದರ ಬಗ್ಗೆ ಹೇಳಿಕೊಳ್ಳುತ್ತಿದ್ದಾರೆ. ಸರ್ಕಾರಕ್ಕೆ ನೀವು ನಿವೇದನೆ ಮಾಡಿ, ಅವರ ಮುಖಾಂತರ ಪರಿಹಾರ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಸಾವು ಅಪ್ಪಿರುವಂತಹ ಕುಟುಂಬಕ್ಕೆ ತಾವು ಪರಿಹಾರವನ್ನು ಕೊಡಬೇಕು ಹಾಗೂ ಈ ಹಂದಿಗಳನ್ನು ಕಾಡಿಗೆ ಓಡಿಸುವುದು ಅಷ್ಟೆ ಅಲ್ಲ, ಸಚಿವರು ದಯವಿಟ್ಟು ಪರಿಹಾರವನ್ನು ಕೊಡಬೇಕೆಂದು ಕೇಳುತ್ತಿದ್ದೇನೆ. ಈ ಹಂದಿಗಳನ್ನು ಹೇಗೆ ನಿಯಂತ್ರಣ ಮಾಡುತ್ತೀರಿ? ಅವುಗಳನ್ನು ಊರಿಂದ ಓಡಿಸಿದ ಮೇಲೆ ವಾಪಸ್ಸು ಬರಬಾರದು. ಅದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ನನಗೆ ಇಷ್ಟು ದಿವಸ ಆನೆಗಳ ಕಾಟದ ಪ್ರಶ್ನೆ ಬಂದಿತ್ತು. ಹಂದಿಗಳ ಕಾಟ ಬಂದಿರಲಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ನಮ್ಮ ರಾಣೆಬೆನ್ನೂರು ತಾಲ್ಲೂಕಿನಲ್ಲಿ ಜಿಂಕೆಗಳ ಕಾಟ ಇದೆ. ಅದರ ಬಗ್ಗೆ ಪ್ರಶ್ನೆ ಈಗ ಕೇಳುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್ : ಇತ್ತೀಚಿನ ದಿನಗಳಲ್ಲಿ ಹಂದಿಗಳ ಕಾಟ ಇದ್ದು, ಬಳ್ಳಾರಿ ಜಾಲಿ ಬೆಳೆದು ಹಂದಿಗಳೆಲ್ಲಾ ವಾಸಿಸುವುದಕ್ಕೆ ಅನುಕೂಲವಾದಂತಹ ವಾತಾವರಣ ನಿರ್ಮಾಣವಾಗಿ ಕಬ್ಬು ಮತ್ತು ಗದ್ದೆ ಬೆಳೆಯುವಂತಹ ರೈತರಿಗೆ ತೊಂದರೆ ಕೊಡುತ್ತಿವೆ. ನಾನು ರೈತನಾಗಿ ಇದು ನನ್ನ ಗಮನಕ್ಕೆ ಬಂದಿದೆ. ಆದರೆ ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ ಅದಕ್ಕೆ ಉತ್ತರ ಹೇಳುವುದು ಸರ್ಕಾರದ ಮತಿಯಿಂದ ಕಷ್ಟವಾಗುತ್ತದೆ. ಆ ಹಂದಿಗಳನ್ನು ಎಲ್ಲಿಗೆ ಕಳುಹಿಸಿಕೊಡಲಿ, ಅವುಗಳನ್ನು ಎಲ್ಲಿಗೆ ಹೊಡೆಯಲಿ.

ಶ್ರೀ ಅರಗ ಜ್ಞಾನೇಂದ್ರ : ಕಮಿಷನ್ ಕೊಟ್ಟರೆ ಸಾಕು, ಅದು ಬಹಳ ಸುಲಭ.

ಶ್ರೀ ಕೆ.ಹೆಚ್. ರಂಗನಾಥ್ : ಅರಗ ಜ್ಞಾನೇಂದ್ರ ಅವರು ನನ್ನ ಸಹಾಯಕ್ಕೆ ಬಂದರೆ ಆಗಬಹುದು. ಸೂರತ್‌ನವರು, ಸಾಗರದವರು, ಚಿಕ್ಕಮಗಳೂರಿನವರು, ಕೊಪ್ಪದವರು, ಶೃಂಗೇರಿಯವರು ನಮ್ಮ ಸಹಾಯಕ್ಕೆ ಬಂದರೆ ಸ್ವಲ್ಪ ಹತೋಟಿಗೆ ತರುವುದಕ್ಕೆ ನಮಗೆ ಸಾಧ್ಯವಾಗುತ್ತದೆ. ಆದರೆ ಕಾನೂನು ನಮಗೆ ಅಡ್ಡಿ ಬರುತ್ತದೆ. ಕಾನೂನು ಏನಿದೆ ಅದು ನಮಗೆ ಪರ್ಮಿಷನ್ ಕೊಡುವುದಿಲ್ಲ. ಇಲ್ಲದೆ ಇದ್ದರೆ ನಾವು ಲಾ ಮಿನಿಸ್ಟರ್‌ರವರ ಸಹಾಯ ಕೇಳಬಹುದಾಗಿತ್ತು. ಅವರು ಮೂಡಿಗೆರೆಯವರು, ಅದರಲ್ಲಿ ಪರಿಣಿತರಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್ : ಅವರು ಹೇಳುತ್ತಿದ್ದರು, ಗುಂಡು ಹಾಕಿ ಸಾಯಿಸಬೇಕು ಹಾಗೂ ಗುಂಡು ಹಾಕಿ ತಿನ್ನಬೇಕು ಎಂದು.

ಶ್ರೀ ಕೆ.ಹೆಚ್. ರಂಗನಾಥ್ : ಸುರೇಶ್‌ಕುಮಾರ್ ಸರಿಯಾಗಿ ಹೇಳಲಿಲ್ಲ. ಗುಂಡು ಹಾಕಿದ ಮೇಲೆ ಅದನ್ನು ತಿನ್ನಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಹಿಂದೊಮ್ಮೆ ಇದರ ಬಗ್ಗೆ ಪ್ರಶ್ನೆ ಬಂದು ಏನಾಯಿತೆಂದು ಹೇಳುತ್ತೇನೆ. ಈ ಹಂದಿಗಳನ್ನು ಹಿಡಿಯುವುದರ ಬಗ್ಗೆ ಚರ್ಚೆಯಾಗಿ ಅದಕ್ಕೆ ನಾನು ಒಂದು ವಿಚಾರ ಹೇಳಿದ್ದೆ. ನಮ್ಮ ಕಡೆ ಕಾಯಿಲೆ ಬಂದು ಹಂದಿಗಳು ಸತ್ತು ಹೋಗಿಬಿಟ್ಟವು. ಆಗ ಜನರಲ್ಲಿ ಏನು ಭಾವನೆ ಬಂತೆಂದರೆ ಆ ಹಂದಿಗಳು ಇದ್ದಾಗ ಹೆಚ್ಚು ಬೆಳೆ ಬರುತ್ತಿತ್ತು, ಮಳೆಯಾಗುತ್ತಿತ್ತು, ಅವುಗಳು ಹೋದಮೇಲೆ ತೊಂದರೆಯಾಗಿದೆ ಎಂದು ತಿಳಿದುಕೊಂಡು ಜನರು ಹಂದಿ ಹೆಚ್ಚು ಬಂದಾಗ ಬೆಳೆ ಬೆಳೆಯುತ್ತದೆ ಮಳೆ ಹೆಚ್ಚು ಆಗುತ್ತದೆ ಎಂದು ಭಾವನೆ ಬಂದಿತ್ತು. ಆಗ ನಾನು ಭೀಮಣ್ಣ ಖಂಡ್ರೆ ಅವರಿಗೆ, ಆ ಹಂದಿಗಳನ್ನು ನಮ್ಮ ಕಡೆ ತಂದುಬಿಡಿ ಎಂದು ಹೇಳಿದೆ. ಜನರಿಗೆ ತಪ್ಪು ಕಲ್ಪನೆ ಇದೆ. ಆ ಹಂದಿಗಳು ಹೆಚ್ಚು ಇದರೆ ಹೆಚ್ಚು ಬೆಳೆಯುತ್ತದೆ, ಅದರಿಂದ ಏನೂ ತೊಂದರೆ ಆಗುವುದಿಲ್ಲವೆಂದು ನನ್ನ ವೈಯುಕ್ತಿಕ ಭಾವನೆ.

ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೇ, ಸರ್ಕಾರ ಈ ವಿಚಾರವನ್ನು ಇಷ್ಟು ಲಘುವಾಗಿ ತೆಗೆದುಕೊಳ್ಳಬಾರದು. ಇದರ ಬಗ್ಗೆ ಕಠಿಣವಾದ ಕ್ರಮವನ್ನು ತೆಗೆದುಕೊಂಡು ಪುನಃ

ಅವುಗಳು ಬೆಳೆಗಳನ್ನು ಹಾಳು ಮಾಡುವುದಕ್ಕೆ ಅವಕಾಶ ಮಾಡಿಕೊಡಬಾರದು. ಇದರಿಂದ ರೈತರು ಕಂಗಾಲಾಗಿದ್ದಾರೆ. ಇವುಗಳ ಹಾವಳಿಯಿಂದ ಏನು ಬೆಳೆ ನಷ್ಟವಾಗಿದೆ, ಹಾಗೂ ಪ್ರಾಣಹಾನಿಯಾಗಿದೆ ಅದಕ್ಕೆ ಸರ್ಕಾರದವರು ಏನು ಪರಿಹಾರ ಕೊಡುತ್ತೀರಿ?

ಅಧ್ಯಕ್ಷರು : ತಾವು ಕುಳಿತುಕೊಳ್ಳಿ. ಅವರು ಶ್ರೀರಂಗಪಟ್ಟಣದ ಹಂದಿ ವಿಷಯ ಹೇಳುತ್ತಿರುವುದು, ಆನೇಕಲ್ ಹಂದಿ ವಿಷಯವಲ್ಲ.

ಶ್ರೀ ಸಿ. ಚೆನ್ನಿಗಪ್ಪ : ಹಂದಿಗಳೆಲ್ಲಾ ಒಂದೆ. ಶ್ರೀರಂಗಪಟ್ಟಣದು ಬೇರೆ ಅಲ್ಲ.

ಅಧ್ಯಕ್ಷರು : ತೊಂದರೆಯಾಗಿರುವುದು ಶ್ರೀರಂಗಪಟ್ಟಣದಲ್ಲಿ. ನಿಮಗೆ ತೊಂದರೆ ಆಗಿದ್ದರೆ ನೀವು ಬೇರೆ ಪ್ರಶ್ನೆ ಕೇಳಿ.

ಶ್ರೀ ಕೆ.ಬಿ. ಕೋಳಿವಾಡ್ : ಅಲ್ಲಿ ಫೆನ್ಸಿಂಗ್ ಹಾಕಿ ಹಂದಿಗಳು ಹೊಲದ ಕಡೆ ಬರದೇ ಇರುವ ಹಾಗೆ ಏನಾದರೂ ಯೋಜನೆ ಮಾಡಿದ್ದೀರೋ ಹೇಗೆ? ಎಲ್ಲಾ ತಾಲ್ಲೂಕಿಗೆ ಫಾರೆಸ್ಟ್ ಏರಿಯಾ ಬೌಂಡ್ರಿಗೆ ಫೆನ್ಸಿಂಗ್ ಹಾಕುವಂತಹ ವಿಚಾರ ಏನಾದರೂ ಸರ್ಕಾರದ ಮುಂದೆ ಇದೆಯೇ?

ಶ್ರೀ ಕೆ.ಹೆಚ್. ರಂಗನಾಥ್ : ಅದು ಅಷ್ಟು ಸುಲಭ ಎಂದು ತಿಳಿದುಕೊಂಡಿದ್ದೀರಾ. ಇನ್ನೇನು ಅಮೇರಿಕಾ ಸರ್ಕಾರ ಎಂದು ತಿಳಿದುಕೊಂಡಿದ್ದೀರಾ? ಗುಡ್ಡಕ್ಕೆ ಹಚ್ಚಡ ಹೊದಿಸುವುದಕ್ಕೆ ಅದೆಲ್ಲಾ ಆಗುವುದಿಲ್ಲ. ಎಲ್ಲಿಂದ ಎಲ್ಲಿಯವರೆಗೆ ಬೇಲಿ ಹಾಕುವುದು? ಅದಕ್ಕೆ ಹಣ ಹಾಗೂ ತಂತಿ ಎಲ್ಲಿಂದ ತರುವುದು. ಅದು ಆಗುವುದಿಲ್ಲ. ಈ ಕಾಡು ಹಂದಿಗಳನ್ನು ಉಳಿಸಿಕೊಳ್ಳಬೇಕು, ಎನ್ನುವ ದೃಷ್ಟಿಯಿಂದ ಒಂದು ಕಾನೂನು ಇದೆ. ಆದರೆ ಬೆಳೆ ನಾಶವಾಗುತ್ತಿದ್ದರೆ, ಮನುಷ್ಯರಿಗೆ ಹಾನಿ ಮಾಡುತ್ತಿದ್ದರೆ, ಆ ಪ್ರಾಣಿಗಳ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುವಂಥಾದ್ದರ ಬಗ್ಗೆ ಅಂದರೆ ಅದನ್ನು ಕೊಲ್ಲುವಂಥಾದ್ದಕ್ಕೂ ಕಾನೂನಿನಲ್ಲಿ ಅವಕಾಶವಿದೆ ಎಂದು ನನಗೆ ತಿಳಿದು ಬಂದಿದೆ. ಆದುದರಿಂದ ಅದನ್ನು ಪರಿಶೀಲನೆ ಮಾಡಿ ಎಲ್ಲೆಲ್ಲಿ ಇಂತಹ ಅನಾಹುತಗಳು ಜಾಸ್ತಿಯಾಗುತ್ತಿದೆ, ಅಲ್ಲಿ ಕ್ರಮ ತೆಗೆದುಕೊಳ್ಳುವಂಥಾದ್ದು ಮಾಡಬೇಕೆಂದು ಇದ್ದೇನೆ.

ವಿವಿಧ ಪ್ರದೇಶಕ್ಕೆ ಅನುಗುಣವಾಗಿ ಯೋಜನೆಗಳು

583 - ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಯೋಜನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿವಿಧ ಪ್ರದೇಶಗಳಿಗೆ ಒಂದೇ ರೀತಿಯ ಯೋಜನೆಗಳನ್ನು ಜಾರಿಗೆ ತರುವುದರಿಂದ ಅದು ವೈಫಲ್ಯವಾಗುವುದಿಲ್ಲವೆ?

ಆ) ಹಾಗಿದ್ದಲ್ಲಿ ವಿವಿಧ ಯೋಜನೆಗಳನ್ನು ತಯಾರಿಸುವಾಗ ಬಯಲುಸೀಮೆ ಕರಾವಳಿ ಪ್ರದೇಶಗಳಿಗೆ ಪ್ರತ್ಯೇಕವಾದ ಯೋಜನೆಗಳ ಅಗತ್ಯವಿರುವುದನ್ನು ಸರ್ಕಾರ ಮನಗಂಡಿದೆಯೇ?

ಇ) ಮನಗಂಡಿದ್ದಲ್ಲಿ ಪ್ರದೇಶಕ್ಕೆ ತಕ್ಕಂತೆ ಯೋಜನೆಗಳನ್ನು ತಯಾರಿಸಲಾಗುವುದೇ?